# ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ಸಮುದ್ರದ ಬಿರುಗಾಳಿಯನ್ನು ಶಾಂತಪಡಿಸಿದನು




ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen


60ರ 48ನೇ ಕಥೆ


**www.M1914.org**

***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada



ಯೇಸು ಮತ್ತು ಶಿಷ್ಯರು ದೋಣಿಯಲ್ಲಿ ಪ್ರಯಾಣವನ್ನು ಮಾಡುವಾಗ ಒಂದು ದೊಡ್ಡ ಬಿರುಗಾಳಿ ಗಲೀಲಯದ ಕಡೆಯಿಂದ ಬೀಸಿದ್ದರಿಂದ ದೋಣಿಯೂ ಒಡೆದು ಹೋಗುತ್ತದೆಯೋ ಎನ್ನುವಂತಾಗಿತ್ತು.

1

ಗಾಳಿ ಬೀಸುವ ಹೊಡೆತವನ್ನು ನೋಡಿ ಗಾಭರಿಗೊಂಡರು ದೋಣಿಯು ತರೆಗಳಿಂದ ಮುಚ್ಚಿ ಹೋಯಿತು, ಆದರೆ ಯೇಸುವು ಗಾಡವಾದ ನಿದ್ರೆಯಲ್ಲಿದ್ದರು.



2

ಆಗ ಶಿಷ್ಯರು, ಗುರುವೇ! ಗುರುವೇ! ನಾವು ಸಾಯುತ್ತಿದ್ದೇವೆ ಎಂದು ಕೂಗಿದರು.




ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ, ಎಲೈ ಅಲ್ಪ ವಿಶ್ವಾಸಿಗಳೇ ಏಕೆ ಸಂದೇಹ ಪಡುತ್ತೀರಿ?




ಎಂದು ಹೇಳಿ ಗಾಳಿಗೂ ಮತ್ತು ಅಲೆಗಳಿಗೂ ಯೇಸುವು ಅಪ್ಪಣೆಯನ್ನು ಕೊಡಲು ಅದು ನಿಂತು ಹೋಯಿತು.




ಗಾಳಿಯು ನಿಂತು ಸಮುದ್ರವು ಶಾಂತವಾಯಿತು. ಅದನ್ನು ನೋಡಿ ಶಿಷ್ಯರು ಆಶ್ಚರ್ಯಪಟ್ಟು ಈತನು ಯಾರಿರಬಹುದು ಗಾಳಿಯು, ಸಮುದ್ರವು ಈತನ ಮಾತನ್ನು ಕೇಳುತ್ತದೆಯಲ್ಲ ಅಂದುಕೊಂಡರು.




ಕೆಲವು ದಿನಗಳ ನಂತರ ಯೇಸು ಕಾರ್ಯನಿರತರಾದರು ಒಬ್ಬ ಸಣ್ಣ ಹುಡುಗನು ತಂದಿದ್ದ ಮದ್ಯಾಹ್ನದ ಊಟದಿಂದ ಆರಣ್ಯದಲ್ಲಿ ೫೦೦೦ ಜನರಿಗೆ ಊಟವನ್ನು ಕೊಟ್ಟರು ದೇವರ ಶಕ್ತಿಯ ಮೂಲಕವಾಗಿ. ಸಂಜೆ ಅವರನ್ನು ಮನೆಗೆ ಕಳಿಸಿದರು.




ಯೇಸುವನ್ನು ಬಿಟ್ಟು ಶಿಷ್ಯರು ಆತನಿಗಿಂತ ಮೊದಲು ಗಲೀಲಾಯ ಸಮುದ್ರದ ಆಚೆ ದಡಕ್ಕೆ ಹೋಗಲು ಅಪ್ಪಣೆಯನ್ನು ಕೊಟ್ಟನು, ಅವರು ದೋಣಿಯನ್ನು ಹತ್ತಿ ಹೊರಟರು.





ಯೇಸುವು ಎಲ್ಲರನ್ನು
ಕಳಿಸಿದ ನಂತರ,
ಆತನು ಬೆಟ್ಟವನ್ನು
ಹತ್ತಿ ಒಬ್ಬಂಟಿಗನಾಗಿ
ಪ್ರಾರ್ಥನೆಯನ್ನು
ಮಾಡಲು ಹೋದನು.

9



ಸಮುದ್ರದ ಮಧ್ಯದಲ್ಲಿ ಶಿಷ್ಯರು
ಗಾಳಿಯಲ್ಲಿ ಸಿಕ್ಕಿಕೊಂಡರು,
ಆ ಗಾಳಿಯು ಅವರನ್ನು
ಮುಂದೆ ಹೋಗುವುದಕ್ಕೆ
ಬಿಡದೆ ಅಲ್ಲೆ ಕೆಲವು
ಘಂಟೆಗಳ ಕಾಲ
ಸುತ್ತಾಡಿಸಿತು.

10



ಶಿಷ್ಯರಿಗೆ ತಿಳಿಯದಿದ್ದರು
ಅವರು ಒಂದು ದೊಡ್ಡ
ಆಶ್ಚರ್ಯಕ್ಕೆಗೊಳಗಾದರು.

11



ಮುಂಜಾನೆ ೬ ಘಂಟೆಯ
ಸಮಯದಲ್ಲಿ ಸಮುದ್ರದ
ಮಧ್ಯದಲ್ಲಿ ಗಾಳಿಯಲ್ಲಿ
ನುಸುಕೊಂಡು ಹೋಗುವ
ಸಂಧರ್ಭದಲ್ಲಿ ಅವರು
ಒಂದು ರೀತಿ ಏನೋ
ನೋಡಿ ದೆವ್ವ ಎಂದು
ಹೆದರಿ ಕೂಗಿದರು.

12



ಅದರೆ ಅದು ಕರ್ತನಾದ
ಯೇಸು ಆಗಿದ್ದರು
ಅವರು ನೀರಿನ ಮೇಲೆ
ನಡೆದು ಅವರ ಬಳಿಗೆ
ಬರುತ್ತಿದ್ದರು.

13

ಯೇಸು ಅವರನ್ನು ಕರೆದು
ಧೈರ್ಯವಾಗಿರಿ, ಹೇದರಬೇಡಿರಿ!!
ಅದು ನಾನೇ ಎಂದರು ಅದನ್ನು
ಕೇಳಿದ. ಪೇತ್ರನು, 'ಸ್ವಾಮಿ
ನೀವೇ ಆಗಿದ್ದರೆ ನನಗೂ ಸಹಾ
ನೀರಿನ ಮೇಲೆ ನಡದು
ಬರುವುದಕ್ಕೆ ಅಪ್ಪಣೆಯನ್ನು
ಕೊಡಿರಿ' ಅಂದನು.



14

ಆಗ ಯೇಸು ಧೈರ್ಯವಾಗಿ ಬಾ ಎಂದರು, ಪೇತ್ರನು ದೋಣಿಯಿಂದ ಇಳಿದು ನೀರಿನ ಮೇಲೆ ನಡೆದು ಯೇಸುವಿನ ಬಳಿಗೆ ಹೊರಟನು.



15



ಹಾಗೆ ಹೋಗುವಾಗ ಗಾಳಿಯ ಅಬ್ಬರವನ್ನು ನೋಡಿ ಹೇದರಿ ಮುಳುಗಲು ಪ್ರಾರಂಭಿಸಿದಾಗ ಯೇಸುವೇ ನನ್ನನ್ನು ರಕ್ಷಿಸು ಎಂದು ಕೂಗಿದನು.

16

ಆಗ ಯೇಸುವು ಪೇತ್ರನಿಗೆ 'ಓ ಅಲ್ಪ ವಿಶ್ವಾಸಿಯೇ ಏಕೆ ಸಂದೇಹಪಟ್ಟೆ' ಎಂದು ಹೇಳಿ ಆತನ ಕೈ ಹಿಡಿದು ಮೇಲಕ್ಕೆ ಎತ್ತಿದ್ದನು. ಅವರು ಇಬ್ಬರು ಸೇರಿ ದೋಣಿಯನ್ನು ಹತ್ತಿದರು, ಗಾಳಿಯ ಅಬ್ಬರ ನಿಂತು ಹೋಯಿತು.



17



ದೋಣಿಯಲ್ಲಿರುವ ಊಳಿದವರೆಲ್ಲರು, ಯೇಸುವನ್ನು ಆರಾಧಿಸಿ 'ಈತನು ನಿಜವಾಗಿಯೂ ದೇವರ ಮಗನು' ಎಂದರು.

18

ಸಮುದ್ರದ ಬಿರುಗಾಳಿಯನ್ನು ಶಾಂತಪಡಿಸಿದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮತ್ತಾಯ **8**, ಮತ್ತಾಯ **14**, ಮಾರ್ಕ **4**, ಲೂಕ **8**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ **3:16**

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.